1636 (2229) ಶ್ರೀ ಶಿವಶಂಕರಪ್ಪ ಟಿ ಹೆಚ್ [ತರೀಕೆರೆ] – ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರನ್ನು ಈಗಾಗಲೇ ಎಷ್ಟು ಬಾರಿ ತುಂಬಲಾಗಿದೇ,

ಆ) ರಾಜ್ಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರ ಹುದ್ದೆಗಳು ಎಷ್ಟು [ಮಾಹಿತಿ ನೀಡುವುದು],

ಇ) ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿ ತುಂಬುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ಈ) ಈ ಇಲಾಖೆಯ ಸಿಬ್ಬಂದಿಯವರು ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರನ್ನು ಪರಿವರ್ತಿಸಿಕೊಂಡು ಚಿತ್ರಕಲೆ, ಸಂಗೀತ, ಹೊಲಿಗೆಯನ್ನಾಗಿ ಪರಿವರ್ತಿಸಿಕೊಂಡ ಹುದ್ದೆಗಳು ಎಷ್ಟು,

ಉ) ಕೃಷಿ ಪ್ರಧಾನ ರಾಷ್ಟ್ರದಲ್ಲಿ ತೋಟಗಾರಿಕೆ ಅವಶ್ಯವಿಲ್ಲವೆಂದು ಪರಿವರ್ತಿಸಿಕೊಂಡಿರುವುದು ಸಮಂಜಸವೇ,

ಊ) ವಿಶೇಷ ಶಿಕ್ಷಕರ ನೇಮಕಾತಿಯಲ್ಲಿ ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರನ್ನು ಸೇರಿಸಿ ಅಧಿಸೂಚನೆ ಹೊರಡಿಸಲಾಗುವುದೇ,

ಋ) ಹಾಗಿದ್ದಲ್ಲಿ, ಎಷ್ಟು ದಿನಗಳಾಗಬಹುದು [ವಿವರ ನೀಡುವುದು] ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) 1988ರಲ್ಲಿ ತುಂಬಲಾಗಿದೆ

ಆ) ರಾಜ್ಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ತೋಟಗಾರಿಕೆ ಕ್ರಾಫ್ಟ್ ಶಿಕ್ಷಕರ 23 ಹುದ್ದೆಗಳು ಖಾಲಿ ಇರುತ್ತವೆ

ಇ) ಇಲ್ಲ

ಈ) ಸರ್ಕಾರಿ ಆದೇಶ ಸಂಖ್ಯೆ ಇಡಿ 219 ಎಸ್‌ಎಲ್‌ಬಿ 98, ದಿನಾಂಕ 25–03–1999ರ ಪ್ರಕಾರ 294 ತೋಟಗಾರಿಕಾ ಹುದ್ದೆಗಳನ್ನು ಸಂಗೀತ, ಚಿತ್ರಕಲೆ ಹುದ್ದೆಗಳನ್ನಾಗಿ ಪರಿವರ್ತಿಸಿಕೊಂಡು ಸ್ಥಳಾಂತರಿಸಿ ಅವಶ್ಯಕತೆಯಿರುವ ಪ್ರೌಢಶಾಲೆಗಳಿಗೆ ಸರಿ ಸಮಾನವಾಗಿ ನೇಮಕಾತಿ ಮಾಡಲು ಆದೇಶಿಸಲಾಗಿತ್ತು

ಉ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ತೋಟಗಾರಿಕೆ ಮಾಡುವಷ್ಟು ಭೂಮಿ ಅಥವಾ ನೀರು ಇಲ್ಲದೇ ಇರುವುದರಿಂದ ತೋಟಗಾರಿಕೆ ಖಾಲಿ ಹುದ್ದೆಗಳನ್ನು ಈ ಹಿಂದೆ ಪರಿವರ್ತಿಸಲಾಗಿದೆ

ಊ) ತೋಟಗಾರಿಕೆ ಹುದ್ದೆ ಖಾಲಿ ಇರುವ ಶಾಲೆಯ ಮುಖ್ಯೋಪಾಧ್ಯಾಯರು ಆ ಶಾಲೆಗೆ ತೋಟಗಾರಿಕೆ ಹುದ್ದೆಯ ಅವಶ್ಯಕತೆ ಇದೆ ಎಂದು ತಿಳಿಸಿದರೆ ಅಂತಹ ಶಾಲೆಗಳಿಂದ ಮಾಹಿತಿ ಪಡೆದು ತೋಟಗಾರಿಕಾ ಹುದ್ದೆಗಳಿಗೂ ನೇಮಕಾತಿ ಮಾಡಬಹುದು

ಋ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದ ಕೂಡಲೇ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆಸ್ಪದವಾಗುತ್ತದೆ

1637 (2120) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಸೇರಿ ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ಈ ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ಕೊಡಲಾಗಿದೆಯೇ,

ಇ) ಇಲ್ಲವಾದಲ್ಲಿ, ಯಾವಾಗ ಕೊಡಲಾಗುವುದು,

ಈ) ಚಿಕ್ಕ ಮಕ್ಕಳಲ್ಲಿ ಬಡವ ಶ್ರೀಮಂತವೆಂಬ ತಾರತಮ್ಯವನ್ನು ಹೋಗಲಾಡಿಸಲು ಎಂಟನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್ ಕೊಡಲು ಸರ್ಕಾರ ಯೋಚಿಸಿದೆಯೇ,

ಉ) ಬಡತನ ರೇಖೆಗಿಂತ ಕೆಳಗಿರುವ ಮಕ್ಕಳ ಸಂಖ್ಯೆಯನ್ನು ಯಾವ ಆಧಾರದ ಮೇಲೆ ಗುರುತಿಸಲಾಗುವುದು,